ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 252/2022**

**ಫ್ರಾಸಾ- 14 ಚಾಸಾ- 30**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನಂದೀಶ |
| ತಂದೆಯ ಹೆಸರುಃ | : | ಕೃಷ್ಣೇಗೌಡ |
| ವಯಸ್ಸುಃ | : | 45 ವರ್ಷ |
| ಉದ್ಯೋಗಃ | : | ಹೆಚ್ ಸಿ ಆಲೂರು ಪಿ ಎಸ್ |
| ವಾಸ | : | ಆಲೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:23-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ಆಲೂರು ಪೊಲೀಸ್ ಠಾಣೆಯಲ್ಲಿ ಕಳೆದ 4 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿನಾಂಕ 7-6-22ರಂದು ನಾನು ಆಲೂರು ಪೊಲೀಸ್ ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1 ಗಂಟೆಗೆ ಸದಾನಂದ ಅಲಿಯಾಸ್ ಷಣ್ಮುಖ ತಂದೆ ಪಾಲಾಕ್ಷ ಇವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ನಿಪಿ-21 ರಂತೆ ಸ್ವೀಕರಿಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-21(ಎ) ಎಂದು ಗುರುತಿಸಲಾಯಿತು. ಅದನ್ನು ಸ್ವೀಕರಿಸಿ ಯುಡಿಆರ್ ನಂಃ 31/22ರಂತೆ ಕೇಸು ದಾಖಲಿಸಿ ಪ್ರ.ವ.ವ.ನ್ನು ನಿಪಿ-22ರಂತೆ ನ್ಯಾಯಾಲಯಕ್ಕೂ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-22(ಎ) ಎಂದು ಗುರುತಿಸಲಾಯಿತು. ಅದನ್ನು ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-31ರವರಿಗೆ

ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

.ನನ್ನ ಮುಂದೆ ಸದಾನಂದ ತಂದೆ ಪಾಲಾಕ್ಷ ಎಂಬುವವರು ನಿಪಿ-21 ರಂತೆ ದೂರುನೀಡಿಲ್ಲ ಮತ್ತು ನಾನುಯಾವುದೇ ಯುಡಿಆರ್ ಪ್ರಕರಣ ದಾಖಲಿಸಿಲ್ಲ ಎಂರೆ ಸರಿಯಲ್ಲ. ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**